(೨) ಶ್ರೀಮತಿ ಪದ್ಮಲತಾರವರ ಪ್ರಕರಣ :

ತುಮಕೂರು ಜಿಲ್ಲೆಯಲ್ಲಿ ಪದ್ಮಲತಾ ಎಂಬುವವರ ಪ್ರಕರಣ ಯಾವುದೂ ಇಲ್ಲ. ಆದರೆ ಪಾವಗಡ ತಾಲ್ಲೂಕಿನ ಪದ್ಮಾವತಮ್ಮ ಎಂಬು ಎ. ಎನ್. ಎಂ. ರವರ ಜೊತೆ ಅಲ್ಲಿನ ಪಂಚಾಯಿತ್ ಪ್ರಧಾನರ ಅಸಭ್ಯ ರೀತಿಯಿಂದ ವರ್ತಿಸಿದ್ದಾರೆಂದು ಪಂಂದೆ ಇವರ ಮೇಲೆ ಪೋಲೀಸರು ಹಲ್ಲೆ ನಡೆಸಿದ್ದಾರೆಂದು ವರದಿಯಾಗಿದ್ದು ಇದರ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಯುತ್ತಿದೆ.

(೩) ಶ್ರೀಮತಿ ಭಾರತಿರವರ ಪ್ರಕರಣ :

ಗುಲ್ಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕು ಕುಂಚಾವರಮ್‌ನಲ್ಲಿ ಕೆಲಸ ಮಾಡುತ್ತಿದ್ದ ಎ.ಎನ್.ಎಂ. ಭಾರತಿಯವರು ವಿಷ ಕುಡಿದು ಸತ್ತಿದ್ದಾರೆಂದು ವಿಧಿ ವಿಜ್ಞಾನ ಪ್ರಯೋಗಾಲಯದ ಸರ್ಟಿಫಿಕೇಟ್ ಆಧಾರದ ಮೇಲೆ ತಿಳಿದು ಬಂದಿದೆ. ಇವರು ತನ್ನ ಗಂಡನೊಂದಿಗೆ ಜಗಳವಾಡುತ್ತಿದ್ದರೆಂದೂ ಸಹ ತಿಳಿದುಬಂದಿದೆ.

(೪) ಶ್ರೀಮತಿ ಲಲಿತ ರವರ ಪ್ರಕರಣ ;

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಭೈನವಿಕಲ್ ನ ಶ್ರೀಮತಿ ಲಲಿತ ಸಿಂತ್ರಿ ಎಂಬ ಎ. ಎನ್ ಎಂ. ಜೀವನದಲ್ಲಿ ಜಿಗುಪ್ಸೆಗೊಂಡು ವಿಷ ಸೇವಿಸಿ ತೀರಿಹೋಗಿದ್ದಾರೆಂದು ಮಹಜರ್‌ನಿಂದ ತಿಳಿದ. ಬಂದಿದೆ. ಆದರೆ ಶವ ಪರೀಕ್ಷೆಯಲ್ಲಿ ಆಕೆ ನೇಣು ಹಾಕಿಕೊಂಡು ತೀರಿ ಹೋದರೆಂದು ತಿಳಿದು ಬಂದಿದೆ. ಇದರ ಬಗ್ಗೆ ಇನ್ನೂ ತಪಾಸಣೆ ನಡೆಯುತ್ತಿದೆ.

೧೨-೫೦ ಪಿ. ಎಂ.

ಸುಳ್ಯ ತಾಲ್ಲೂಕಿನಲ್ಲಿ ಜಾಲ್ಸೂರಿನಲ್ಲಿ ಸಾರಿಗೆ ಸಂಸ್ಥೆಗಳ ಬಸ್ಸುಗಳ ನಿಲುಗಡೆಗೆ ಒತ್ತಾಯ

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ, ಸುಳ್ಯ ತಾಲ್ಲೂಕಿನ, ಜಾಲ್ಸೂರು ಎಂಬಲ್ಲಿ ಆರಣ ಇಲಾಖೆ ಮತ್ತು ಕಂದಾಯ ಇಲಾಖೆಯ ತಪಾಸಣಾ ಗೇಟು ಇರುವುದು. ಈ ಗೇಟು ಇಲ್ಲಿ ಮಂಗಳೂರು-ಮೈಸೂರು, ಬೆಂಗಳೂರು ಹೆದ್ದಾರಿಗೂ ಜಾಲ್ಸೂರು, ಕಾಸರಗೋಡು ರಸ್ತೆಗೂ ಅಡ್ಡಲಾಗಿ ಬರುವುದು. ಈ ಜಾಲ್ಸೂರು ಎಂಬ ಸ್ಥಳದ ಪರಿಸರದಲ್ಲಿ, ವಾಣಿಜ್ಯ ಕಟ್ಟಡಗಳು, ತಪಾಸಣಾ ಅಧಿಕಾರಿಗಳ ಕಛೇರಿ, ಹಾಗೂ ಇನ್ನಿತರ ಖಾಸಗಿ ಸಂಸ್ಥೆ, ಶಾಲೆಗಳೂ ಬರುವುದು. ಇಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ, ಎಕ್ಸ್‌ಪ್ರೆಸ್, ತಡೆರಹಿತ ಬಸ್ಸುಗಳಿಗೆ ನಿಲುಗಡೆ ಕೊಡಂತ್ತಿಲ್ಲ. ಪ್ರಕೃತ ಈ ಗೇಟು ಬಳಿ ಮಂಗಳೂರು-ತಿಪಟೂರು, ತಿಪಟೂರು-ಮಂಗಳೂರು ಒಂದು ತಡೆರಹಿತ ಬಸ್ಸಿಗೆ ಮಾತ್ರ ದಿನದಲ್ಲಿ ಎರಡು ಬಾರಿ ನಿಲುಗಡೆ ನೀಡಲಾಗುತ್ತಿದೆ, ಇತರ ರಾಜ್ಯ ಸಾರಿಗೆ ಬಸ್ಸುಗಳಿಗೆ (ತಡೆರಹಿತ. ಎಕ್ಸ್‌ಪ್ರೆಸ್) ಬಸ್ಸುಗಳಿಗೆ ನಿಲುಗಡೆ ಕೊಡದೆ ಇರುವುದರಿಂದ ಮಂಗಳೂರು ಕಡೆಯಿಂದ ಬರುವ ಪ್ರಯಾಣಿಕರು ಜಾಲ್ಸೂರಿನಲ್ಲಿ ಇಳಿಯುವ ಬದಲು ೨೦ ಕಿಲೋಮೀಟರ್ ದೂರದ ಸುಳ್ಯಕ್ಕೆ ಹೋಗಿ ಇಳಿಯಬೇಕಾಗುವುದು. ಸುಳ್ಯದ ಕಡೆಯಿಂದ ಬಂದ ಪ್ರಯಾಣಿಕರು ಜಾಲ್ಸೂರು ಎಂಬಲ್ಲಿ ಇಳಿಯುವ ಬದಲು ೨೭ ಕಿಲೋಮೀಟರ್ ದೂರದ ಪುತ್ತೂರಿನಲ್ಲಿ ಹೋಗಿ ಇಳಿಯಬೇಕಾಗುವುದು ಮಾತ್ರವಲ್ಲದೆ, ರಾತ್ರಿ ಹೊತ್ತಿನಲ್ಲಿ ಬಡ ನಿರ್ಗತಿಕ ಪ್ರಯಾಣಿಕನೂ ನೂರಾರು ರೂಪಾಯಿಗಳನ್ನು ಹೆಚ್ಚಿಗೆ ಖರ್ಚು ಮಾಡಿ ಖಾಸಗೀ ವಾಹನಗಳನ್ನು ಬಾಡಿಗೆ ಹಿಡಿದು ಜಾಲ್ಸೂರು ಎಂಬ ಸ್ಥಳವನ್ನು ಸೇರಬೇಕಾಗುವುದು. ಅದೇ ರೀತಿ ಜಾಲ್ಸೂರಿನಲ್ಲಿ ಇಳಿದು ಪಂಜಿಕಲ್ಲು-ಕಾಸರಗೋಡಿಗೆ ಹೋಗುವ ಮತ್ತು ಅಲ್ಲಿಂದ ಬರುವ ಪ್ರಯಾಣಿಕರೂ ಇದೇ ತೊಂದರೆಗಳನ್ನು ಅನುಭವಿಸುತ್ತಿರುವರು.

ಆದುದರಿಂದ ಜಾಲ್ಸೂರು ತಪಾಸಣಾ ಗೇಟು ಬಳಿ, ಹೇಗೆ ಆದರೂ ಯಾವುದೇ ವಾಹನಗಳು ನಿಂತು ಮುಂದೆ ಸಾಗಲೇ ಬೇಕಾಗುವುದು. ಆದುದರಿಂದ ಇಲ್ಲಿ ತಡೆರಹಿತ ಮತ್ತು ಎಕ್ಸ್‌ಪ್ರೆಸ್, ಕ.ರಾ.ರ.ಸಾ., ಸಂಸ್ಥೆ ಬಸ್ಸುಗಳನ್ನು ಒಂದೆರಡು ನಿಮಿಷದ ನಿಲುಗಡೆ ಕೊಟ್ಟು ಪ್ರಯಾಣಿಕರಿಗೆ ಉಪಕಾರವನ್ನು ಮಾಡಬೇಕಾಗಿ, ಇಲಾಖೆಯನ್ನು ಸರ್ಕಾರದ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು)—ಗಿರ್ಸಿಗರ ಜನಗಣತಿಯ ಅಂಕಿಅಂಶದಂತೆ ಜಲಸೂರಿನ ಗ್ರಾಮವು ೪,೬೩೭ ಜನಸಂಖ್ಯೆ ಹೊಂದಿದೆ. ಈ ಗ್ರಾಮವು ಮೈಸೂರು—ವಂಗಳೂರು ರಾಜ್ಯ ಹೆದ್ದಾರಿಯಲ್ಲಿ ಸುಳ್ಯದಿಂದ ೯.೫ ಕಿ.ಮಿ.ಗಳ ಅಂತರದಲ್ಲಿಯೂ ಹಾಗೂ ಪುತ್ತೂರಿನಿಂದ ೨೭.೩ ಕಿ.ಮಿ.ಗಳ ಅಂತರದಲ್ಲಿಯೂ ಇದೆ. ಪ್ರಸ್ತುತ ಈ ಗ್ರಾಮದಲ್ಲಿ ಧರ್ಮಸ್ಥಳ, ವಂಗಳೂರು, ವಿಡಿಕೇರಿ, ಮೈಸೂರು, ಕಾಸರಗೋಡು ಮುಂತಾದ ಕಡೆಗಳಿಂದ ಬರುವ ೧೪ ವೇಗದೂತ-ತಡೆರಹಿತ ಸಾರಿಗೆಗಳೂ ಸೇರಿ ಒಟ್ಟು ೫೨ ಸಾರಿಗೆಗಳು ನಿಂತು ಹೋಗುತ್ತಿದ್ದು, ಜಲಸೂರಿನ ಸಾರಿಗೆ ಬೇಡಿಕೆಯನ್ನು ಸಮರ್ಥವಾಗಿ ಪೂರೈಸುತ್ತಿವೆ. ಇದರಿಂದಾಗಿ ಜಲಸೂರಿನ ಜನತೆಯು ಯಾವುದೇ ತೊಂದರೆ ಇಲ್ಲದೆ ಬೆಳಿಗ್ಗೆ ೬-೦೦ ಗಂಟೆಯಿಂದ ರಾತ್ರಿ ೧೦-೮೦ ಗಂಟೆಯವರೆಗೂ ಬಸ್ಸುಗಳ ಉಪಯೋಗ ಪಡೆಯಬಹುದಾಗಿದೆ. ಹೆಚ್ಚಿನ ತಡೆರಹಿತ-ವೇಗದೂತ ಸಾರಿಗೆಗಳಿಗೆ ಜಲಸೂರಿನಲ್ಲಿ ಕೊಂಡಿಕೆ ನಿಲುಗಡೆ ನೀಡಿದ್ದೇ ಆದರೆ ನೇರ ಪ್ರಯಾಣಿಕರಿಗೆ ಕಿರಿಕಿರಿಯಾಗುವುದರಿಂದ ಹೆಚ್ಚಿನ ತಡೆರಹಿತ-ವೇಗದೂತ ಸಾರಿಗೆಗಳಿಗೆ ಜಲಸೂರಿನಲ್ಲಿ ನಿಲುಗಡೆ ನೀಡುವುದು ಸಮಂಜಸವಲ್ಲವೆಂದು ಈ ಮೂಲಕ ತಿಳಿಸಬಯಸುತ್ತೇನೆ.

ಶ್ರೀ ಕೆ. ಕಂಠಾಲ.—ಅಧ್ಯಕ್ಷರೇ, ಅಲ್ಲಿ ಯಾವ ಬಸ್‌ನ್ನೂ ಕೂಡ ನಿಲುಗಡೆ ಮಾಡುವುದಿಲ್ಲ. ತಪಾಸಣೆ ಗೇಟ್ ಇರುವುದರಿಂದ ಕೆಲವೊಮ್ಮೆ ನಿಲ್ಲುತ್ತವೆ ಅಷ್ಟೆ.

ಅಧ್ಯಕ್ಷರು.— ಹಿಳಿರ ಕೆಳಗೆ ತಾವು ಚರ್ಚೆ ಮಾಡುವಂತಿಲ್ಲ, ದಯವಿಟ್ಟು ಕುಳಿತುಕೊಳ್ಳಿ.

(೧೨) ಸಂಕೇಶ್ವರ ಮತಕ್ಷೇತ್ರದ ದಡ್ಡಿನಾಗನೂರು ಏತ ನೀರಾವರಿ ಯೋಜನೆಯನ್ನು ಸಂಪೂರ್ಣ ಮಾಡಲಂ ಒತ್ತಾಯ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಸಂಕೇಶ್ವರ ಮತಕ್ಷೇತ್ರದ ದಡ್ಡಿನಾಗನೂರು ಏತ ನೀರಾವರಿ ಹಾಗೂ ಸಲಾಮ್‌ವಾಡಿ ಏತ ನೀರಾವರಿ ಸರಕಾರದಿಂದ ಪೂರ್ತಿ ಮಾಡುವಂತೆ ವಿನವಿ ಸಮಿತಿಯವರು ಶಿಫಾರಸ್ಸು ಮಾಡಿದ್ದರೂ ಇಲ್ಲಿಯವರೆಗೆ ಈ ವಿಷಯದಲ್ಲಿ ಸರಕಾರ ನಿರ್ಲಕ್ಷ್ಯ ಮಾಡುತ್ತಿರುವುದು ದುರದೃಷ್ಟಕರ. ಘಟಪ್ರಭಾ ಯೋಜನೆಯ ಅಡಿಯಲ್ಲಿ ಬರುವ ಪುನರ್ವಸತಿ ಕೇಂದ್ರಗಳಿಗೆ ದಡ್ಡಿನಾಗನೂರ್ ಏತ ನೀರಾವರಿ ಮಾಡಿಕೊಡುವುದಾಗಿ ದಿವಂಗತ ದೇವರಾಜ್ ಅರಸರು ಮುಖ್ಯಮಂತ್ರಿಗಳಿದ್ದಾಗ ಪುನರ್ವಸತಿ ಕೇಂದ್ರಕ್ಕೆ ಭೇಟಿ ನೀಡಿ ಆಶ್ವಾಸನೆ ಕೊಟ್ಟಿದ್ದು ಹಾಗೂ ಸಲಾಮ್‌ವಾಡಿ ಏತ ನೀರಾವರಿಯನ್ನು ಪೂರ್ತಿ ಮಾಡಿಕೊಡುವುದಾಗಿ ಭರವಸೆ ಇಟ್ಟು ಜನರ ಬೇಡಿಕೆಗೆ ಬೆಲೆ ಕೊಟ್ಟರುತ್ತಾರೆ. ಆದರೆ ಇಲ್ಲಿಯವರೆಗೆ ಈ ಕೆಲಸವು ಪೂರ್ತಿಗೊಂಡಿಲ್ಲ. ವಿನವಿ ಸಮಿತಿಯಂ ಅಧ್ಯಕ್ಷರು ಹಾಗೂ ಸದಸ್ಯರು ಸ್ಥಳಕ್ಕೆ ಭೇಟಿ ಕೊಟ್ಟು ಜನರ ತೊಂದರೆಯನ್ನು ಅರಿತುಕೊಂಡಿರುತ್ತಾರೆ. ಈ ವಿಷಯದಲ್ಲಿ ಇಲಾಖೆಯ ಮೇಲ್ಮಟ್ಟದ ಅಧಿಕಾರಿಗಳ ನಿಯೋಗವನ್ನು ಕಳುಹಿಸಿ ಜನರಿಗಾಗುತ್ತಿರುವ ತೊಂದರೆಯನ್ನು ಅವರಂ ಅರಿತುಕೊಳ್ಳುವುದು ಉಚಿತ. ಕಾರಣ ಈ ವಿಷಯದಲ್ಲಿ ಸರಕಾರದ ಹೇಳಿಕೆಯನ್ನು ಸದನದಲ್ಲಿ ಬಯಸುತ್ತೇನೆ.

ಶ್ರೀ ಕೆ. ಕೃಷ್ಣಮೂರ್ತಿ.—ಅಧ್ಯಕ್ಷರೇ, ನಾನು ಸಂಬಂಧಪಟ್ಟ ಚೀಫ್ ಇಂಜಿನಿಯರ್‌ರವರನ್ನು ಸ್ಥಳಕ್ಕೆ ಎಂಟಂ ದಿವಸಗಳೊಳಗಾಗಿ ಭೇಟಿ ನೀಡುವಂತೆ ಹೇಳಿ ಏನು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

(೧೩) ಬಾಳೆಹೊನ್ನೂರಿನ ಕಾಫಿ ಸಂಶೋಧನಾ ಕೇಂದ್ರದ ಸುಬ್ರಹ್ಮಣ್ಯಂ ಎನ್ನುವವರ ಕೊಲೆಯಾಗಿರುವುದಂ

ಶ್ರೀ ಹೆಚ್. ಜಿ. ಗೋವಿಂದೇಗೌಡ (ಶೃಂಗೇರಿ).—ಶೃಂಗೇರಿ ಕ್ಷೇತ್ರದ ಬಾಳೇಹೊನ್ನೂರಿನ ಕಾಫಿ ಸಂಶೋಧನಾ ಕೇಂದ್ರದಲ್ಲಿ ಸೀನಿಯರ್ ಲಯಸನ್ ಆಫೀಸರ್ ಆಗಿದ್ದ ಎಸ್. ಪಿ. ಸುಬ್ರಹ್ಮಣ್ಯಂ ಎಂಬು ವವರನ್ನು ಆಸ್ಸಾಂ ರಾಜ್ಯದಿಂದ ತರಬೇತಿ ಪಡೆಯಲು ಬಂದಿದ್ದ ದೇವಜ್ಯೋತಿ ಬರುವಾ ಎಂಬ ವಿದ್ಯಾರ್ಥಿ ದಿನಾಂಕ ೯-೧೧-೧೯೮೭ರಂದು ಚೂರಿಯಿಂದ ಇರಿದು ಕೊಲೆ ಮಾಡಿ ಪೋಲೀಸ್‌ರವರ